ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1255/2016

ಚಾಸಾ:5 ಪ್ರಾಸಾ:4

ದಿನಾಂಕ: 04.09.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವೆಂಕಟೇಶ್ ಖಾರ್ವಿ |
| ತಂದೆಯ ಹೆಸರು | : | ವಾಸುದೇವ ಖಾರ್ವಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**</u>

ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿ: 08-07-2017 ರಂದು ಗಂಗೊಳ್ಳಿಯ ಹಳೆ ಪಂಚಾಯಿತಿಯಲ್ಲಿ ಮಾಡಿರುತ್ತೇನೆ. ಆಗ ಚಾಸಾ-2 ಮತ್ತು ಪೊಲೀಸರು ಇದ್ದರು. ಸ್ಥಳವನ್ನು ಪ್ರಾಸಾ-1ರವರು ತೋರಿಸಿರುತ್ತಾರೆ. ಸದ್ರಿ ಸ್ಥಳ ಪಂಚಾಯಿತಿ ಕಚೇರಿಯ ಒಳಭಾಗವಾಗಿರುತ್ತದೆ. ಪಂಚನಾಮೆಯನ್ನು 12-15 ರಿಂದ 1 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿ ನಿಪಿ-3ನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:**</u>

ಪಂಚರಾಗಿ ಹಾಜರಾಗಲು ಪೊಲೀಸರು ನನಗೆ ಲಿಖಿತವಾಗಿ ತಿಳುವಳಿಕೆ ಹೊರಡಿಸಿಲ್ಲ. ತಕ್ಷೀರಿನ ಬಗ್ಗೆ ನನಗೆ ಯಾವುದೇ ವಿವರ ಇಲ್ಲ. ನಿಪಿ-2ನ್ನು ನಾನು ಹೇಳಿ ಬರೆಯಿಸಿಲ್ಲ. ನಿಪಿ-2ನ್ನು ಜರುಗಿಸುವ ಕಾಲಕ್ಕೆ ಪೊಲೀಸರು ಯಾವುದೇ ವಸ್ತುವನ್ನು ವಶಕ್ಕೆ ಪಡೆದಿಲ್ಲ. ಘಟನಾ ಸ್ಥಳದಲ್ಲಿ ತಕ್ಷೀರಿನ ಕುರುಹು ಇರಲಿಲ್ಲ ಎಂದರೆ ಸರಿ. ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ:**</u> <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**